ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 23-05-2016

# ಮಾಧ್ಯಮದವರ ಗಮನಕ್ಕೆ

ಜೂನ್ 10 ರಂದು ರಾಜ್ಯ ವಿಧಾನಸಭಾ ಕ್ಷೇತ್ರದಿಂದ ರಾಜ್ಯ ವಿಧಾನ ಪರಿಷತ್ ಕ್ಷೇತ್ರಕ್ಕೆ ಹಾಗೂ ಜೂನ್ 11 ರಂದು ರಾಜ್ಯಸಭೆಗೆ ನಡೆಯಲಿರುವ ಚುನಾವಣಾ ವರದಿ ಮಾಡಲು ಅನುವಾಗುವಂತೆ ಮಾನ್ಯತೆ ಪಡೆದ ಮಾಧ್ಯಮ ಪ್ರತಿನಿಧಿಗಳು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸುದ್ದಿ ಮತ್ತು ಪತ್ರಿಕಾ ಶಾಖೆಗೆ ಮೇ 25 ರೊಳಗೆ ತಮ್ಮ ಮಾಧ್ಯಮ ಮುಖ್ಯಸ್ಥರ ಶಿಫಾರಸ್ಸು ಪತ್ರ ಹಾಗೂ ತಲಾ 5 ಭಾವಚಿತ್ರಗಳನ್ನು ನೀಡಲು ಕೋರಲಾಗಿದೆ.

ನಿರ್ದೇಶಕರ ಪರವಾಗಿ

ಪತ್ರಿಕಾ ಪ್ರಕಟಣೆ

# ಸಂಚಾರಿ ಗ್ರಂಥಾಲಯದ ಸೇವೆ ಸ್ಥಗಿತ

**ಬೆಂಗಳೂರು, ಮೇ 23 (ಕರ್ನಾಟಕ ವಾರ್ತೆ)**

ಸಾರ್ವಜನಿಕ ಗ್ರಂಥಾಲಯ ಇಲಾಖೆ, ನಗರ ಕೇಂದ್ರ ಗ್ರಂಥಾಲಯ, ಕೇಂದ್ರ ವಲಯ, ಬೆಂಗಳೂರು ಇಲ್ಲಿ 'ಡಾ. ಎಸ್.ಆರ್. ರಂಗನಾಥನ್' ಸಂಚಾರಿ ಗ್ರಂಥಾಲಯ ವಾಹನಕ್ಕೆ ಎಫ್.ಸಿ. ಹಾಗೂ ಸಣ್ಣಪುಟ್ಟ ದರಸ್ತಿ ಮಾಡಿಸಬೇಕಾಗಿರುವುದರಿಂದ ಸಂಚಾರಿ ಗ್ರಂಥಾಲಯದ ಸೇವೆಯನ್ನು ಓದುಗರಿಗೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ್ದು, ಸಾರ್ವಜನಿಕ ಓದುಗರು ಸಹಕರಿಸಬೇಕಾಗಿ ಕೋರಿದೆ.

ಬಾಬು:ಜಿಪಿಆರ್.

# ಸಮನ್ವಯಾಧಿಕಾರಿ ಹುದ್ದೆಗೆ ಅರ್ಜಿ ಆಹ್ವಾನ

**ಬೆಂಗಳೂರು, ಮೇ 23 (ಕರ್ನಾಟಕ ವಾರ್ತೆ)**

ರಾಜ್ಯದಲ್ಲಿ ಖಾಲಿ ಇರುವ ಕ್ಷೇತ್ರ ಸಂಪನ್ಮೂಲ ಕೇಂದ್ರಗಳಲ್ಲಿನ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ (ಬಿ.ಆರ್.ಸಿ.) ಹುದ್ದೆಗಳನ್ನು ಭರ್ತಿಮಾಡಲು ಸೇವೆಯಲ್ಲಿರುವ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ವೃಂದದ ಅಧಿಕಾರಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿಯನ್ನು ಸಲ್ಲಿಸಲು ಮೇ 27 ಕೊನೆಯ ದಿನವಾಗಿದ್ದು, ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ಸಂಪರ್ಕಿಸುವುದು ಅಥವಾ ಇಲಾಖಾ ವೆಬ್‌ಸೈಟ್ www.ssakarnataka.gov.in ನ್ನು ವೀಕ್ಷಿಸಬಹುದು.

ಬಾಬು:ಜಿಪಿಆರ್.

# SSA Invites Applications

Bengaluru, May 27 (Karnataka Information)

The Sarva Shiksha Abhiyan is inviting applications from the High school Head Masters and equivalent grade officers for the posts of Block Resource Co-coordinators (BRC). The last date for submitting the application is 27.05.2016. 5.30 pm. For more information candidates can visit. www.ssakarnataka.gov.in & also contact District DDPI (Admin), & BEO of the concerned Districts and Blocks.

babu:gpr.

# ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಚುನಾವಣೆ

**ಬೆಂಗಳೂರು, ಮೇ 23 (ಕರ್ನಾಟಕ ವಾರ್ತೆ)**

ಕರ್ನಾಟಕ ವಿಧಾನ ಸಭೆಯ ಚುನಾಯಿತ ಸದಸ್ಯರಿಂದ ರಾಜ್ಯಸಭೆಗೆ ಆಯ್ಕೆಗೊಂಡ ನಾಲ್ಕು ಸದಸ್ಯರುಗಳ ಪೈಕಿ ಮೂವರು ಸದಸ್ಯರು ಜೂನ್ 30 ರಂದು ನಿವೃತ್ತರಾಗಲಿರುವುದರಿಂದ ಹಾಗೂ ದಿನಾಂಕ; 04–05–2016 ರಂದು ಒಂದು ಸ್ಥಾನವು ರಾಜೀನಾಮೆಯಿಂದ ತೆರವಾಗಿರುವುದರಿಂದ ಅವರ ಸ್ಥಾನಗಳನ್ನು ತುಂಬಲು ರಾಜ್ಯಸಭೆಗೆ ದ್ವೈವಾರ್ಷಿಕ ಚುನಾವಣೆಯನ್ನು ನಡೆಸಲಾಗುವುದು.

ಅಧಿಸೂಚನೆಯನ್ನು ಮೇ 24 ರಂದು ಹೊರಡಿಸಲಾಗುತ್ತದೆ. ಮೇ 31 ರಂದು ನಾಮಪತ್ರ ಸಲ್ಲಿಸಲು ಕೊನೆಯ ದಿನ. ಜೂನ್ 1 ರಂದು ನಾಮಪತ್ರ ಪರಿಶೀಲನೆ ನಡೆಸಲಾಗುವುದು. ಉಮೇದುವಾರಿಕೆಯನ್ನು ಹಿಂಪಡೆಯಲು ಜೂನ್ 3 ಕೊನೆಯ ದಿನವಾಗಿದೆ. ಅವಶ್ಯಕತೆಯಿದ್ದಲ್ಲಿ ಜೂನ್ 11 ರಂದು ಬೆಳಿಗ್ಗೆ 9–00 ರಿಂದ ಸಂಜೆ 4–00 ಗಂಟೆಯವರೆಗೆ ಮತದಾನ ನಡೆಯಲಿದ್ದು ಅದೇ ದಿನ ಸಂಜೆ ಮತದಾನ ಎಣಿಕೆ ನಡೆಯಲಿದೆ.

ಕರ್ನಾಟಕ ವಿಧಾನಸಭೆಯ ಕಾರ್ಯದರ್ಶಿ ಎಸ್. ಮೂರ್ತಿ ಚುನಾವಣಾಧಿಕಾರಿಯಾಗಿ ಹಾಗೂ ಉಪ ಕಾರ್ಯದರ್ಶಿ ಎಂ.ಎಸ್. ಕುಮಾರಸ್ವಾಮಿ ಸಹಾಯಕ ಚುನಾವಣಾಧಿಕಾರಿಯಾಗಿರುತ್ತಾರೆ.

ಚುನಾವಣೆಗೆ ಸ್ಪರ್ಧಿಸಲಿಚ್ಛಿಸುವ ಅಭ್ಯರ್ಥಿಗಳು ಮೇ 24 ರಿಂದ 31 ರವರೆಗೆ ಮೇಲ್ಕಂಡ ಅಧಿಕಾರಿಯವರಿಗೆ ಕಚೇರಿಯಲ್ಲಿ ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 3.00 ಗಂಟೆಯವರೆಗೆ

ನಾಮಪತ್ರ ಸಲ್ಲಿಸಬಹುದಾಗಿದ್ದು, ಮೇ 29 ರ ಭಾನುವಾರ ಸಾರ್ವತ್ರಿಕ ರಜಾದಿನವಾಗಿರುವುದರಿಂದ ಆ ದಿನದಂದು ನಾಮಪತ್ರಗಳನ್ನು ಸ್ವೀಕರಿಸಲಾಗುವುದಿಲ್ಲ.

ಪ್ರತಿಯೊಬ್ಬ ಅಭ್ಯರ್ಥಿಯು ತಮ್ಮ ನಾಮಪತ್ರದ ದಸ್ತಾವೇಜನ್ನು ನಿಗದಿತ ನಮೂನೆ 2ಸಿಯಲ್ಲಿ ಸಲ್ಲಿಸಬೇಕು ಮತ್ತು ಅವರ ಉಮೇದುವಾರಿಕೆಗೆ ಸೂಚಿಕರಾಗಿ, ಕನಿಷ್ಠ ಹತ್ತು ಜನ ಹಾಲಿ ವಿಧಾನಸಭಾ ಚುನಾಯಿತ ಸದಸ್ಯರು ಸಹಿ ಮಾಡಿರಬೇಕು. ಈ ಸಂಬಂಧದಲ್ಲಿ 1951 ನೇ ಇಸವಿಯ ಪ್ರಜಾಪ್ರಾತಿನಿಧ್ಯ ಅಧಿನಿಯಮದ 34(1)(ಬಿ) ಯೊಂದಿಗೆ ಓದಲಾದ ಪ್ರಕರಣ 39 (2) ಕ್ಕೆ ಅಭ್ಯರ್ಥಿಗಳ ಗಮನವನ್ನು ಸೆಳೆಯಲಾಗಿದೆ. ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳೂ ನಾಮಪತ್ರದೊಂದಿಗೆ ರೂ 5,000/- ಗಳನ್ನು ಇತರ ಅಭ್ಯರ್ಥಿಗಳು ರೂ. 10,000/- ಗಳನ್ನು ಠೇವಣಿ ಇಡಬೇಕಾಗುತ್ತದೆ.

ಹೆಚ್ಚಿನ ವಿವರಗಳಿಗೆ ಚುನಾವಣಾಧಿಕಾರಿ/ಸಹಾಯಕ ಚುನಾವಣಾಧಿಕಾರಿಗಳನ್ನು ಸಂಪರ್ಕಿಸಬಹುದು ಎಂದು ಚುನಾವಣಾಧಿಕಾರಿಗಳೂ ಆದ ಕರ್ನಾಟಕ ವಿಧಾನಸಭೆಯ ಕಾರ್ಯದರ್ಶಿ ಎಸ್. ಮೂರ್ತಿ ಅವರು ತಿಳಿಸಿದ್ದಾರೆ.

ಬಾಬು:ಜಿಪಿಆರ್.

# ವಿಧಾನ ಪರಿಷತ್ತಿನ ಏಳು ಸ್ಥಾನಗಳಿಗೆ ದ್ವೈವಾರ್ಷಿಕ ಚುನಾವಣೆ

**ಬೆಂಗಳೂರು, ಮೇ 23 (ಕರ್ನಾಟಕ ವಾರ್ತೆ)**

ಕರ್ನಾಟಕ ವಿಧಾನ ಸಭೆಯ ಸದಸ್ಯರಿಂದ ವಿಧಾನ ಪರಿಷತ್ತಿಗೆ ಚುನಾಯಿತರಾಗಿದ್ದ ಏಳು ಸದಸ್ಯರುಗಳು ನಿವೃತ್ತರಾಗಲಿರುವುದರಿಂದ ತೆರವಾಗಿರುವ ಅವರ ಸ್ಥಾನಗಳನ್ನು ತುಂಬಲು ವಿಧಾನ ಪರಿಷತ್ತಿಗೆ ದ್ವೈವಾರ್ಷಿಕ ಚುನಾವಣೆಯನ್ನು ನಡೆಸಲಾಗುವುದು.

ಅಧಿಸೂಚನೆಯನ್ನು ಮೇ 24 ರಂದು ಹೊರಡಿಸಲಾಗುತ್ತದೆ. ಮೇ 31 ರಂದು ನಾಮಪತ್ರ ಸಲ್ಲಿಸಲು ಕೊನೆಯ ದಿನ. ಜೂನ್ 1 ರಂದು ನಾಮಪತ್ರ ಪರಿಶೀಲನೆ ನಡೆಸಲಾಗುವುದು. ಉಮೇದುವಾರಿಕೆಯನ್ನು ಹಿಂಪಡೆಯಲು ಜೂನ್ 3 ಕೊನೆಯ ದಿನವಾಗಿದೆ. ಅವಶ್ಯಕತೆಯಿದ್ದಲ್ಲಿ ಜೂನ್ 10 ರಂದು ಬೆಳಿಗ್ಗೆ 9-00 ರಿಂದ ಸಂಜೆ 4-00 ಗಂಟೆಯವರೆಗೆ ಮತದಾನ ನಡೆಯಲಿದ್ದು ಅದೇ ದಿನ ಸಂಜೆ ಮತದಾನ ಎಣಿಕೆ ನಡೆಯಲಿದೆ.

ಕರ್ನಾಟಕ ವಿಧಾನಸಭೆಯ ಕಾರ್ಯದರ್ಶಿ ಎಸ್. ಮೂರ್ತಿ ಚುನಾವಣಾಧಿಕಾರಿಯಾಗಿ ಹಾಗೂ ಉಪ ಕಾರ್ಯದರ್ಶಿ ಎಂ.ಎಸ್. ಕುಮಾರಸ್ವಾಮಿ ಸಹಾಯಕ ಚುನಾವಣಾಧಿಕಾರಿಯಾಗಿರುತ್ತಾರೆ.

ಚುನಾವಣೆಗೆ ಸ್ಪರ್ಧಿಸಲಿಚ್ಛಿಸುವ ಅಭ್ಯರ್ಥಿಗಳು ಮೇ 24 ರಿಂದ 31 ರವರೆಗೆ ಮೇಲ್ಕಂಡ ಅಧಿಕಾರಿಯವರಿಗೆ ಕಚೇರಿಯಲ್ಲಿ ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 3.00 ಗಂಟೆಯವರೆಗೆ ನಾಮಪತ್ರ ಸಲ್ಲಿಸಬಹುದಾಗಿದ್ದು, ಮೇ 29 ರ ಭಾನುವಾರ ಸಾರ್ವತ್ರಿಕ ರಜಾದಿನವಾಗಿರುವುದರಿಂದ ಆ ದಿನದಂದು ನಾಮಪತ್ರಗಳನ್ನು ಸ್ವೀಕರಿಸಲಾಗುವುದಿಲ್ಲ.

ಪ್ರತಿಯೊಬ್ಬ ಅಭ್ಯರ್ಥಿಯು ತಮ್ಮ ನಾಮಪತ್ರದ ದಸ್ತಾವೇಜನ್ನು ನಿಗದಿತ ನಮೂನೆ 2ಸಿಯಲ್ಲಿ ಸಲ್ಲಿಸಬೇಕು ಮತ್ತು ಅವರ ಉಮೇದುವಾರಿಕೆಗೆ ಸೂಚಿಕರಾಗಿ, ಕನಿಷ್ಠ ಹತ್ತು ಜನ ಹಾಲಿ ವಿಧಾನಸಭಾ ಚುನಾಯಿತ ಸದಸ್ಯರು ಸಹಿ ಮಾಡಿರಬೇಕು. ಈ ಸಂಬಂಧದಲ್ಲಿ 1951 ನೇ ಇಸವಿಯ ಪ್ರಜಾಪ್ರಾತಿನಿಧ್ಯ ಅಧಿನಿಯಮದ 34(1)(ಬಿ) ಯೊಂದಿಗೆ ಓದಲಾದ ಪ್ರಕರಣ 39 (2) ಕ್ಕೆ ಅಭ್ಯರ್ಥಿಗಳ ಗಮನವನ್ನು ಸೆಳೆಯಲಾಗಿದೆ. ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳೂ ನಾಮಪತ್ರದೊಂದಿಗೆ ರೂ 5,000/- ಗಳನ್ನು ಇತರ ಅಭ್ಯರ್ಥಿಗಳು ರೂ. 10,000/- ಗಳನ್ನು ಠೇವಣಿ ಇಡಬೇಕಾಗುತ್ತದೆ.

ಹೆಚ್ಚಿನ ವಿವರಗಳಿಗೆ ಚುನಾವಣಾಧಿಕಾರಿ/ಸಹಾಯಕ ಚುನಾವಣಾಧಿಕಾರಿಗಳನ್ನು ಸಂಪರ್ಕಿಸಬಹುದು ಎಂದು ಚುನಾವಣಾಧಿಕಾರಿಗಳೂ ಆದ ಕರ್ನಾಟಕ ವಿಧಾನಸಭೆಯ ಕಾರ್ಯದರ್ಶಿ ಎಸ್. ಮೂರ್ತಿ ಅವರು ತಿಳಿಸಿದ್ದಾರೆ.

ಬಾಬು:ಜಿಪಿಆರ್.